# ಸಾರಾಂಶ

ದೇವರ ಸ್ವಭಾವವನ್ನು ಪರೀಕ್ಷಿಸುವುದು ಹೇಗೆ ಧೈರ್ಯವುಳ್ಳದ್ದು ಎಂಬುದನ್ನು ಪ್ರಯಾಣದ ಪ್ರಾರಂಭದಲ್ಲಿ ಮಾತಾಡಿದ್ದನ್ನು ಒಮ್ಮೆ ಜ್ಞಾಪಕಕ್ಕೆ ತಂದುಕೊಳ್ಳೋಣ. ಮಾರ್ಗದಲ್ಲಿ ಭಯಾನಕ ಸವಾಳುಗಳಿದ್ದರೂ ಒಟ್ಟಾಗಿ ನಮ್ಮ ಸಾಹಸದಲ್ಲಿ ಪ್ರಗತಿ ಹೊಂದಿದ್ದೇವೆ. ದೇವರು ತನ್ನ ಸೃಷ್ಟಿಯಲ್ಲಿ, ತನ್ನ ಕುಮಾರನಲ್ಲಿ ಮತ್ತು ಪರಿಶುದ್ಧ ಬರಹಗಳಲ್ಲಿ ತನ್ನನ್ನು ಪ್ರಕಟಿಸಿಕೊಳ್ಳದಿದ್ದರೆ ದೇವರ ಬಗ್ಗೆ ಮಾಡಿದ ನಮ್ಮ ಸಂಶೋಧನೆಯಲ್ಲಿ ಯಾವುದೇ ಪ್ರಗತಿ ಮಾಡಲಾಗುವದಿಲ್ಲವೆಂದು ನಾವು ಅರಿಕೆ ಮಾಡುತ್ತೇವೆ. ದೇವರು ತನ್ನ ಬಗ್ಗೆ ಪ್ರಕಟಿಸಿಕೊಳ್ಳದೇ ಇರುವದನ್ನು ನಾವು ತಿಳಿಯಲಾರೆವು. ಇದು ಎರಡು ಸಂಗತಿಗಳ ಬಗ್ಗೆ ತೀವ್ರವಾಗಿ ಅರುಹು ಉಳ್ಳವರನ್ನಾಗಿ ಮಾಡುವುದು. ಮೊದಲನೆಯದು, ಆತನ ಸಹಾಯವಿಲ್ಲದೇ ಆತನನ್ನು ತಿಳಿದುಕೊಳ್ಳಲು ನಾವು ಸಂಪೂರ್ಣವಾಗಿ ಸಹಾಯ ಹೀನರಾಗಿರುವೆವು. ಎರಡನೆಯದು, ದೇವರು ಇದ್ದಾನೆ ಎಂಬುದನ್ನು ಸೃಷ್ಟಿಯಿಂದ ತಿಳಿದುಕೊಳ್ಳುವದರಲ್ಲಿ ನಾವು ಭರವಸೆಯಿಂದ ಇರಬಹುದು. ದೇವರು ಹೇಗಿದ್ದಾನೆ, ನಾವು ಹೇಗಿರಬೇಕು, ಏನು ಮಾಡಬೇಕು ಎಂದು ಆತನು ಬಯಸುತ್ತಾನೆ ಎಂಬುದನ್ನು ನಾವು ಬೈಬಲಿನಿಂದ ಕಲಿತುಕೊಳ್ಳಬಹುದು. ನಾವು ಒಂದಾಗಿ ಅಧ್ಯಯನ ಮಾಡುವಲ್ಲಿ ಬೈಬಲಿನ ವಿಪುಲವಾದ ಉಪಯೋಗದ ಬಗ್ಗೆ ಇದು ವಿವರಿಸುತ್ತದೆ.

ತಂದೆಯಂತೆ - ದೇವರ ಪಾತ್ರದ ವಿವಿಧತೆಯ ಬಗ್ಗೆ ನನ್ನ ಹಾಗೆಯೇ ನೀವೂ ಸಹ ಆಶ್ಚರ್ಯಚಕಿತರಾಗ ಬಹುದು ಮತ್ತು ಭಕ್ತಿಭಾವ ಹೊಂದಬಹುದು ಎಂದು ನಾನು ನಂಬುತ್ತೇನೆ. ನಮ್ಮ ಪ್ರಯಾಣದಲ್ಲಿ ಸಮಯದ ಮೂಲೆಗಳನ್ನು ತಿರುಗಿಸಿದ್ದೇವೆ. ದೇವರು ನಿತ್ಯನಾದ ತಂದೆ, ಸೃಷ್ಟಿಸುವ ತಂದೆ, ಸಾರ್ವತ್ರಿಕ ತಂದೆ, ಆಯ್ಕೆಮಾಡುವ ತಂದೆ ಹಾಗೂ ಆತ್ಮಿಕ ತಂದೆ ಎಂಬುದನ್ನು ದೃಶ್ಯಗಳು ತೋರಿಸಿವೆ.

ಆ ಪುರಾತನ ಮಂಜುಗಳ ಮುಖಾಂತರ ಏದೆನ್ ತೋಟದಲ್ಲಿ ದೃಷ್ಟಿಸಿದಾಗ ಪ್ರಥಮ ಸೃಷ್ಟಿಯ ಪರಿಶುದ್ಧ ಪರಿಸ್ಥಿತಿಗಳಲ್ಲಿರುವ ಪುರುಷನನ್ನೂ ಸ್ತ್ರೀಯನ್ನೂ - ತಮ್ಮ ತಂದೆಯಂತಿದ್ದ ಜೀವಿಗಳನ್ನು ನೋಡಿದಾಗ ನಮ್ಮ ಹೃದಯಗಳು ಆನಂದದಿಂದ ಕುಣಿದಾಡಿದೆವು. ಅವರು ದೇವರಿಗೆ ಅವಿಧೇಯರಾಗಿ ತಳ್ಳುವಿಕೆಯನ್ನು ಸ್ವೀಕರಿಸಿ, ಆತನಿಂದ ಬೇರೆಯಾಗುವದರ ಪರಿಣಾಮಗಳನ್ನು ಅನುಭವಿಸುವದನ್ನು ಗಮನಿಸುವಾಗ ನಾವು ಮುರಿದ ಹೃದಯದವರಾಗಿ ನಿಂತುಕೊಂಡೆವು. ಬಿದ್ದುಹೋದ ಮಾನವತೆಯನ್ನು ಪುನ ಸ್ಥಾಪಿಸಲು ದೇವರು ತಾಳ್ಮೆ ಯಿಂದ ಕಾರ್ಯ ಮಾಡುವದನ್ನು ಅನುಸರಿಸಿದಾಗ ನಮ್ಮ ಆತ್ಮಗಳು ಪುನರುಜ್ಜೀವನ ಹೊಂದಿದವು. ಅತೀಯಾದ ಕೆಟ್ಟತನವಿದ್ದರೂ ದೇವರು ನಾವೆಯ ಮುಖಾಂತರ ನೋಹ ಮತ್ತು ಕೆಲವು ನೀತಿಯುಳ್ಳ ಆತ್ಮಗಳನ್ನು ಜಲಪ್ರಳಯದಿಂದ ತಪ್ಪಿಸಿದನು. ವಿಗ್ರಹಾರಧನೆ, ಮೂರ್ತಿ ಪೂಜೆಗಳಿದ್ದರೂ ದೇವರು ಅಬ್ರಹಾಮನನ್ನು ಕರೆಯುವದರ ಮುಖಾಂತರ ತನ್ನ ಅದ್ಭುತವಾದ ನಕ್ಷೆಯಲ್ಲಿ ದೃಢತೆಯುಳ್ಳವನಾಗಿದ್ದನು. ಅಬ್ರಹಾಮನ ಮೂಲಕ ಆತನು ತನ್ನ ಜನಾಂಗವನ್ನು ಹೊಸ ದಿಕ್ಕಿನಲ್ಲಿ ನಡಿಸಲು ಬಯಸಿದನು (ಗಲಾತ್ಯ 3:6-9). ಮೋಶೆಯ ವ್ಯಕ್ತಿತ್ವದಲ್ಲಿ ದೇವರು ತನ್ನ ಜನಾಂಗವನ್ನು ಅಂತಿಮವಾಗಿ ಮೆಸ್ಸೀಯನ ಅಂದರೆ ಕ್ರಿಸ್ತನ ಬಳಿಗೆ ನಡಿಸಲು ರೂಪಿಸಲ್ಪಟ್ಟ ನಿಯಮದೊಂದಿಗೆ ತನ್ನ ಜನರನ್ನು ಕಾಪಾಡಿಕೊಳ್ಳುವಂತೆ ನೋಡಿದನು (ಗಲಾತ್ಯ 3:23-25).

ಆಮೇಲೆ ಅದ್ವಿತೀಯವಾಗಿ ಜನಿಸಿದ ದೇವರ ಕುಮಾರನು ಲೋಕದೊಳಗೆ ತಲುಪಿದ್ದನ್ನು ನಾವು ಗುರುತಿಸಿದೆವು. ದೇವರ ದೃಷ್ಟಿಕೋನದಂತೆ "ಕಾಲವು ಪರಿಪೂರ್ಣವಾದಾಗ" ಮಧ್ಯಾಹ್ನದ ಸೂರ್ಯನಿಗಿಂತ ಹೆಚ್ಚಾದ ವೈಭವದೊಂದಿಗೆ ಆತನ ಕುಮಾರನು ಬರುವದನ್ನು ನಾವು ನೋಡಿದೆವು. ಆತನ ಅದ್ವೀಯತೆ, ವೈಭವ, ವ್ಯಕ್ತಿತ್ವ ಹಾಗೂ *ಮಹಿಮೆಯು* ಬಹಳ ದೃಢಪಡಿಸಲು ಒತ್ತಾಯಿಸುವಂಥದ್ದೂ *ಶ್ರೇಷ್ಠ*ವಾದ ವೈಭವವುಳ್ಳದ್ದೂ ಆಗಿತ್ತು. ಈ ಶುದ್ಧವಾದ ಮತ್ತು ನೀತಿಯುಳ್ಳ ಮನುಷ್ಯನು ತನ್ನನ್ನು ಲೋಕದ ಪಾಪಗಳಿಗಾಗಿ ಯಜ್ಞವಾಗಿ ಅರ್ಪಿಸಿದಾಗ ಸೂರ್ಯನ ಪ್ರಕಾಶವು ಕತ್ತಲೆಯಿಂದ ಮುಚ್ಚಲ್ಪಟ್ಟಿತು (ಮಾರ್ಕ 15:33). ದೃಶ್ಯವು ಪ್ರಕಾಶಮಾನವಾದದ್ದೂ ಆಳವಾಗಿ ಚುಚ್ಚುವಂಥದ್ದೂ "ಬೇರೆ ಜಗತ್ತಿನ" ಸಂಗತಿಗಳನ್ನು ಪ್ರದರ್ಶಿಸುವಂಥದ್ದೂ ಆಗಿತ್ತು. ಯೇಸುವಿನ ಮುಂದೆ ನಿಂತುಕೊಂಡು ಆತನು ಸಾಯುವದನ್ನು ಗಮನಿಸುತ್ತಿದ್ದ ರೋಮನ್ ಶತಾಧಿಪತಿಯೂ ಸಹ, "ನಿಜವಾಗಿ ಈ ಮನುಷ್ಯನು ದೇವರ ಕುಮಾರನು" (ಮಾರ್ಕ 15:39) ಎಂದು ಹೇಳಿದನು.

ನಾವು ಅಗ್ರಾಹ್ಯವಾದ ಪ್ರಯಾಣದಲ್ಲಿದ್ದೇವೆ. ದೇವರು ತನ್ನನ್ನು ನಜರೇತಿನ ಯೇಸುವಿನ ಆತ್ಮೀಯ ತಂದೆಯಂತೆ ತೋರಿಸಿಕೊಂಡದ್ದನ್ನು ನೋಡಿದ್ದೇವೆ - ಆದರೆ ಅದು ಕಥೆಯ ಅಂತ್ಯವಾಗಿರುವುದೋ? ದೇವರನ್ನು ತನ್ನ *ಆತ್ಮಿಕ* ತಂದೆಯಂತೆ ತೋರಿಸಲು ಮಾತ್ರವೇ ಯೇಸುವು ಲೋಕಕ್ಕೆ ಬಂದನೋ? ಇದು ಮನಸ್ಸನ್ನು ಕೊರೆಯುವಂಥ ಪ್ರಕಟನೆಯಾಗಿದೆ. ಇದು ನಮ್ಮ ಅತೀದೊಡ್ಡ ಸ್ತೋತ್ರಕ್ಕೆ ಹಾಗೂ ಆಶ್ಚರ್ಯಪಡುವದಕ್ಕೆ ಯೋಗ್ಯವಾಗಿದೆ. ಹಾಗಿದ್ದರೂ ಕಟ್ಟಕಡೆಯವರೆಗೆ ನಮ್ಮ ಮನಸ್ಸುಗಳನ್ನು ವಿಸ್ತರಿಸುವ ಹಾಗೂ ಉಪಕಾರ ಮತ್ತು ಕೃತಜ್ಞತಾ ಸ್ತುತಿಯೊಂದಿಗೆ ನಮ್ಮ ಆತ್ಮಗಳನ್ನು ಮೇಲಕ್ಕೇರಿಸುವ ಸಂಗತಿಯಾಗಿರುತ್ತದೆ. ದೇವರನ್ನು ನಮ್ಮ ಆತ್ಮಿಕ ತಂದೆಯಂತೆ ಹೊಂದುಕೊಳ್ಳಲು, ಯೇಸುವಿನ ಆತ್ಮಿಕ ತಂದೆಯು ನಮ್ಮ ಪಾಪಗಳಿಗಾಗಿ ತನ್ನ ಕುಮಾರನನ್ನು ಯಜ್ಞವಾಗಿ ಅರ್ಪಿಸಿದನು. ಇದು ನಮ್ಮ ಮಧ್ಯದಲ್ಲಿಯ ದೇವರ ಕೆಲಸದ ಉನ್ನತ ಸ್ಥಿತಿಯಾಗಿದೆ. ಸಮಯವು ತೀರುವವರೆಗೂ ಇದಕ್ಕಿಂತ ಹೆಚ್ಚಿನ ಕಾರ್ಯವು ಬರುತ್ತಿರುವದಿಲ್ಲ. ಬರಲಿಕ್ಕಿದ್ದ ಶತಮಾನಗಳಲ್ಲಿ ಬೈಬಲಿನಂಥ ಇನ್ನೊಂದು ಪುಸ್ತಕದಲ್ಲಿ, ತಂದೆಯಂತೆ ಇನ್ನೊಂದು ಪಾತ್ರದಲ್ಲಿ ದೇವರು ವಿವರಿಸಲ್ಪಡುವುದು ಯಾವುದೂ ಇರುವದಿಲ್ಲ. ಕ್ರೈಸ್ತ ಯುಗದಲ್ಲಿ ವಿಮೋಚನೆಯ ಆತನ ಮಹಾ ಯೋಜನೆಯು ಅತ್ಯುನ್ನತ ಸ್ಥಿತಿಯನ್ನು ನಾವು ಅನುಭವಿಸುತ್ತಿದ್ದೇವೆ. ಅದು ಆಶ್ಚರ್ಯಕರವಾದ ಯೋಜನೆಯಾಗಿದೆ. ಅದು ದೇವರ ಸಂಧಾನ ಕಾರ್ಯದ ಶಿಖರವಾಗಿದೆ. ಜಗತ್ತು ಸೃಷ್ಟಿಸಲ್ಪಡುವ ಮೊದಲೇ ದೇವರು ಅದರ ನೆರವೇರುವಿಕೆಯನ್ನು ಕ್ರಿಸ್ತನಲ್ಲಿ ನೋಡಿದನು.

> ನಾವು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಲೋಕದ ಅಸ್ತಿವಾರಕ್ಕೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು. ತನ್ನ ಪ್ರಿಯನಲ್ಲಿಯೇ ಆತನು ನಮಗೆ ಉಚಿತವಾಗಿ ಅನುಗ್ರಹಿಸಿದ ತನ್ನ ಕೃಪಾ ಮಹಿಮೆಯ ಸುತ್ತಿಗಾಗಿ ಆತನು ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಯೇಸು ಕ್ರಿಸ್ತನ ಮೂಲಕ ನಮ್ಮನ್ನು ತನಗೋಸ್ಕರ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ಪ್ರೀತಿಯಲ್ಲಿ ಮೊದಲೇ ನೇಮಿಸಿದನು (ಎಫೆಸ 1:4-6).

ಕೃಪಾಪೂರ್ಣನಾದ, ಪ್ರೀತಿಯುಳ್ಳ ತಂದೆಯಿಂದ ಎಂಥ ಉದಾತ್ತವಾದ ಮತ್ತು ಮಹಿಮೆಯುಳ್ಳ ಕಾರ್ಯ! ಆತನ ಮಕ್ಕಳಾಗಲು ನಮಗೆ ಆತನು ಒಂದು ಮಾರ್ಗವನ್ನು ಒದಗಿಸಿದ್ದಾನೆ. ಆತನು ನಮ್ಮ ಆತ್ಮಿಕ ತಂದೆಯಾಗಿರಲು ಬಯಸುತ್ತಾನೆ. ಜನಾಂಗದ ಪ್ರಾರಂಭದಲ್ಲಿ ಆತನು ಮಾನವ ಕುಲವನ್ನು ಸೃಷ್ಟಿಸಿದಂತೆ ನಮ್ಮನ್ನು ಪುನ ಸೃಷ್ಟಿಸಲು

ಆತನು ಹಂಬಲಿಸುತ್ತಾನೆ. ನಾವು ಆತನ ಕುಟುಂಬದಲ್ಲಿ ಇರಬೇಕೆಂದು ಆತನು ಅಪೇಕ್ಷಿಸುತ್ತಾನೆ. "ಮನೆಗೆ ಬರಬೇಕೆಂದು" ಆತನು ಬಯಸುತ್ತಾನೆ.

ಆತನ ಕೃಪಾಪೂರ್ಣವಾದ ಸಂಧಾನದ ಆರಂಭಕ್ಕೆ ನಾವು ಹೇಗೆ ಉತ್ತರ ಕೊಡೋಣ? ಆತನ ಹೋಲಿಸಲಾಗದ ಪ್ರೀತಿಯಕೊಡುಗೆಯನ್ನು, ಯೇಸು ಕ್ರಿಸ್ತನನ್ನು ನಾವು ಸ್ವೀಕರಿಸೋಣ (ಯೋಹಾನ 8:24). ದೇವರ ಕುಮಾರನು ಎಂದು ಆತನನ್ನು ನಂಬಿ ಮಾನಸಾಂತರದಲ್ಲಿ ಆತನ ಕಡೆಗೆ ತಿರುಗಿ ಕೊಳ್ಳೋಣ (ಲೂಕ 13:1-5). ಹಾಗೂ ನಮ್ಮ ಪಾಪಗಳ ಕ್ಷಮಾಪಣೆಗಾಗಿ ಆತನಲ್ಲಿ ಬಾಪ್ತಿಸ್ಮ ಮಾಡಿಸಿಕೊಳ್ಳೋಣ (ಮತ್ತಾಯ 28:18-20ಣಿ ಅಪೊಸ್ತಲರ ಕೃತ್ಯ 2:38, 39). ಈ ಹುಡುಕುವಿಕೆಯಲ್ಲಿ ನಾವು ಪಾಪಕ್ಕೆ ಸಾಯುತ್ತೇವೆ ಹಾಗೂ ಪುನ ಹುಟ್ಟುವಾಗ ನೂತನ ಜೀವಕ್ಕೆ ಎಬ್ಬಿಸಲ್ಪಡುತ್ತೇವೆ(ಯೋಹಾನ3:3-5ಣಿಗಲಾತ್ಯ3:26-29ಣಿರೋಮಾಪುರ6:1-12). ಈ ರೀತಿಯಲ್ಲಿ ನಾವು ವಿಶ್ವಾಸವನ್ನು ಅರಿಕೆಮಾಡಿದ ಮೇಲೆ ಪರಲೋಕದಲ್ಲಿ ನಾವು ಆತ್ಮಿಕ ತಂದೆಯ ಮುಂದೆ ಆತನಿಂದ ನಾವು ಸ್ವೀಕರಿಸಲ್ಪಟ್ಟಿದ್ದೇವೆಂದು ತಿಳಿಯುತ್ತೇವೆ (ಮತ್ತಾಯ 10:32, 33). ಕ್ರಿಸ್ತನಲ್ಲಿ ನಾವು ದೇವರ "ನೂತನ ಸೃಷ್ಟಿ" ಯಾಗಿದ್ದೇವೆ.

> ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು *ನೂತನ ಸೃಷ್ಟಿಯಾದನು.* ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು. ಇದೆಲ್ಲಾ ದೇವರಿಂದಲೇ ಉಂಟಾದದ್ದು. ಆತನು ಕ್ರಿಸ್ತನ ಮೂಲಕ ನಮ್ಮನ್ನು ತನಗೆ ಸಮಾಧಾನಪಡಿಸಿಕೊಂಡು ಸಮಾಧಾನ ವಿಷಯವಾದ ಸೇವೆಯನ್ನು ನಮಗೆ ಅನುಗ್ರಹಿಸಿದ್ದಾನೆ, ಆ ಸಮಾಧಾನ ವಾಕ್ಯವೇನಂದರೆ ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನ ಪಡಿಸಿಕೊಳ್ಳುತ್ತಿದ್ದನೆಂಬುದೇ, ಅದನ್ನು ಸಾರುವ ಸೇವೆಗೆ ನಮ್ಮನ್ನು ನೇಮಿಸಿದ್ದಾನೆ (2 ಕೊರಿಂಥ 5:17-19ಎ).

ಕಾರ್ಯವು ಮಾಡಲ್ಪಟ್ಟಿದೆ. ನಮ್ಮ ಪಾಪಗಳಿಗಾಗಿ ಯಜ್ಞವಾಗಿ ತನ್ನ ಕುಮಾರನನ್ನು ಅರ್ಪಿಸಲಿಕ್ಕೆ ದೇವರ ಯೋಜನೆಯು ಮಹಿಮೆಯಿಂದ ಪೂರ್ತಿಗೊಳಿಸಲ್ಪಟ್ಟಿದೆ. "ಕ್ರಿಸ್ತನಲ್ಲಿ ತನ್ನೊಂದಿಗೆ ಲೋಕವನ್ನು ಸಂಧಾನಪಡಿಸಿಕೊಳ್ಳುವ" ದೇವರ ಕೊಡುಗೆಯನ್ನು ನಾವು ಸ್ವೀಕರಿಸುವಾಗ, ಆತನ ಕುಮಾರನಾದ ಯೇಸುವಿನ ಮುಖಾಂತರ ಆತನು ಆತ್ಮೀಕ ತಂದೆಯಾಗುವನು. ನಮ್ಮ ನಿತ್ಯವಾದ ಅಂತ್ಯಸ್ಥಿತಿಗೆ ಎಂಥಾ ಶ್ರೇಷ್ಠವಾದ ಅವಕಾಶ! ಆತ್ಮಿಕ ತಂದೆಯೊಂದಿಗೆ ನಮ್ಮ ಸಾರ್ವಭೌಮನಂತೆ ಹಾಗೂ ಯೇಸುವಿನೊಂದಿಗೆ ನಮ್ಮ ರಕ್ಷಕನಂತೆ, ಸಹೋದರನಂತೆ ಮತ್ತು ಪರಲೋಕದ ಸ್ನೇಹಿತನಂತೆ, ನಾವು ದೇವರ ಕಾರ್ಯದ ಒಂದು ಭಾಗವಾಗುವೆವು. ದೇವರ ಪಾರಲೌಕಿಕ ಜ್ಞಾನದಿಂದ ತಟ್ಟಲ್ಪಟ್ಟ ಇಡೀ ವಿಶ್ವದ ಎಲ್ಲಾ ಬುದ್ಧಿಯುಳ್ಳ ಜೀವಿಗಳು ಭಯಭಕ್ತಿಯಿಂದ ತುಂಬಿರುವರು. ಎಫೆಸ 3:10-12 ಹೀಗೆ ಹೇಳುತ್ತದೆ.

> ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾ ವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬುದನ್ನು ಉದ್ದೇಶಿಸಿದ್ದನು. ದೇವರ ಸಾನ್ನಿಧ್ಯ ಸೇರುವದಕ್ಕೆ ನಮಗಿರುವ ಭರವಸವುಳ್ಳ ಧೈರ್ಯವು ಕ್ರಿಸ್ತನಲ್ಲಿ ಇಟ್ಟಿರುವ ನಂಬಿಕೆಯ ಮೂಲಕ ಆತನಲ್ಲಿಯೇ ನಮಗೆ ಉಂಟಾಯಿತು.